ಮೂಲ ದಾವಾ ಸಂಖ್ಯೆ. 37/2023 ಪಿ ಡಬ್ಲ್ಯೂ 1

(ದಿನಾಂಕ 22-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಪಿ ಕೆ ವಕೀಲರಿಂದಃ-

ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿರುವ ವಿಚಾರವನ್ನು ನಾನೇ ಹೇಳಿ ಬರೆಸಿದ್ದೇನೆ. ದಾವಾಸ್ತಿಯ ಸರ್ವೆ ನಂ.89/ಎ1, 89/1, 89/2, 89/3 ಇರುತ್ತವೆ. ಸರ್ವೆ ನಂ.89/ಎ1, 1 ಎಕರೆ ಇದೆ, 89/1, 1 ಎಕರೆ, 89/2, ಅರ್ಧ ಎಕರೆ, 89/3 ಅರ್ಧ ಎಕರೆ ಇರುತ್ತವೆ. ಈಗ ಸಧ್ಯ ಚಾಲ್ತಿ ಪಹಣಿಯಲ್ಲಿ ನನ್ನ ಹೆಸರು 3 ಎಕರೆಗೆ ಮಾತ್ರ ದಾಖಲಿದೆ ಆದರೆ ನಾನು 3.80 ಎಕರೆ ಕಬ್ಜದಲ್ಲಿದ್ದೇನೆ. ಚಾಲ್ತಿ ಪಹಣಿಯನ್ನು ನ್ಯಾಯಾಲಯದ ಮುಂದೆ ಹಾಜರುಮಾಡಿದ್ದೇನೆ. ನಾನು ಆ ರೀತಿ ಪಹಣಿ ಹಾಜರು ಮಾಡಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸರ್ವೆ ನಂ.89 ಒಟ್ಟು ಕ್ಷೇತ್ರ 8.80 ಎಕರೆ ಇರುತ್ತದೆ. ದಾವಾಸ್ತಿ ನಿಮಗೆ ಹೇಗೆ ಬಂತು ಎಂದರೆ ಸಾಕ್ಷಿಯು ದಾವಾಸ್ತಿ ನಮ್ಮ ತಂದೆಗೆ ಅವರ ತಾಯಿಯಿಂದ ಬಂತು, ಅವರ ತಾಯಿಗೆ ಅವರ ತಂದೆ ದಾನಪತ್ರದ ಮೂಲಕ ಕೊಟ್ಟಿರುತ್ತಾರೆ. ದಾವಾಸ್ತಿಯು ಸಧ್ಯ ಚೌಡಮ್ಮ, ಆಂಜಿನೇಯ, ರಮೇಶ ಇವರ ಹೆಸರಿನಲ್ಲಿ ಪಹಣಿ ಇದೆ. ಸದರಿ ಆಸ್ತಿಯ ಪಹಣಿ ಸನ್ 2016 ರಲ್ಲಿ ನಮ್ಮ ಹೆಸರಿಗೆ ಹಕ್ಕುಬದಲಾವಣೆಯಾಗಿರುತ್ತದೆ. ಅದಕ್ಕಿಂತ ಪೂರ್ವದಲ್ಲಿ ದಾವಾಸ್ತಿಯು ನಮ್ಮ ತಂದೆಯ ಹೆಸರಿನಲ್ಲಿತ್ತು. ದಾವಾಸ್ತಿಯು ನಮ್ಮ ತಂದೆಯವರಿಗೆ ಎಷ್ಟನೇ ಇಸ್ವಿಯಲ್ಲಿ ಬಂತು ಎನ್ನುವುದು ನನಗೆ ಗೊತ್ತಿಲ್ಲ. ಸನ್ 1968 ನೇ ಇಸ್ವಿಯಲ್ಲಿ ದಾವಾಸ್ತಿಯ ಪಹಣಿ ನಮ್ಮ ಅಜ್ಜಿಯ ಹೆಸರಿನಲ್ಲಿತ್ತು. ನಮ್ಮ ಅಜ್ಜಿಯಿಂದ ನಮ್ಮ ತಂದೆಯವರು ಯಾವ ವರ್ಷ ಹಕ್ಕು ಬದಲಾವಣೆ ಮಾಡಿಕೊಂಡರೆಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯ ಮರಣದ ನಂತರ ದಾವಾಸ್ತಿ ನಮ್ಮ ಹೆಸರಿಗೆ ಬಂದಿರುತ್ತದೆ. ಪಾಲುವಿಭಾಗದ ಪ್ರಕಾರ ನಿಮಗೆಲ್ಲರಿಗೂ ಎಷುಟ ಕ್ಷೇತ್ರ ಬಂತು ಎಂದರೆ ನನಗೆ ಅರ್ಧ ಎಕರೆ ಬಂದಿದೆ ಉಳಿದವರ ಬಗ್ಗೆ ನನಗೆ ಗೊತ್ತಿಲ್ಲವೆನ್ನುತ್ತಾರೆ. 3.80 ಎಕರೆ ಜಮೀನಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಪಹಣಿ ಇಲ್ಲವೆಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ನಾನು ಕಬ್ಜದಲ್ಲಿದ್ದೇನೆ ಎನ್ನುತ್ತಾರೆ.

ನಾನು ಪಿ ಯು ಸಿ ವರೆಗೆ ವ್ಯಾಸಂಗ ಮಾಡಿದ್ದೇನೆ ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ವಾದಪತ್ರವನ್ನು ದಾಖಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಎ ಸಿ ನ್ಯಾಯಾಲಯದ ಮತ್ತು ಡಿ ಸಿ ನ್ಯಾಯಾಲಯದಲ್ಲಿ ನಮ್ಮ ವಕೀಲರಿಗೆ ನಾವೇ ಮಾಹಿತಿ ನೀಡಿದ್ದೇವೆ. ಸರ್ವೆ ನಂ.89 ರಲ್ಲಿ ಪುರುಷೋತ್ತಮ ಎನ್ನುವವರಿಗೆ 3 ಎಕರೆ ಜಮೀನು ಬಂದಿದೆ. ಅವರನ್ನು ನಾವು ಎ ಸಿ ನ್ಯಾಯಾಲಯದ ಮತ್ತು ಡಿ ಸಿ ನ್ಯಾಯಾಲಯದಲ್ಲಿ ಪಕ್ಷಕಾರರು ಅಂತಾ

ಮಾಡಿರುತ್ತೇವೆ. ಈ ದಾವೆಯಲ್ಲಿ ನಾನು ಅವರನ್ನು ಪಕ್ಷಕಾರರು ಅಂತಾ ಮಾಡಿಲ್ಲ. ಸರ್ವೆ ನಂ.89 ಒಟ್ಟು 8.80 ಎಕರೆ ಜಮೀನಿನ ಪಹಣಿಯಲ್ಲಿ ಯಾರ್ಯಾರ ಹೆಸರು ಎಷ್ಟು ಎಷ್ಟು ಕ್ಷೇತ್ರಕ್ಕೆ ದಾಖಲಿದೆ ಎಂದು ನನಗೆ ಗೊತ್ತಿಲ್ಲ. ಸನ್ 1968 ರಿಂದ ನಮ್ಮ ಅಜ್ಜಿಯ ಹೆಸರಿನಲ್ಲಿ 3 ಎಕರೆ ಜಮೀನಿಗೆ ಪಹಣಿ ಇದೆ ಎಂದರೆ ಸರಿ. ಉಳಿದ 5.80 ಎಕರೆ ಜಮೀನಿನಲ್ಲಿ ಪುರುಶೋತ್ತಮ ಇವರ ಹೆಸರಿಗೆ 3 ಎಕರೆ ಜಮೀನಿದೆ ಎಂದರೆ ಸರಿ. ಉಳಿದ 2.80 ಎಕರೆ ಜಮೀನು ಪ್ರತಿವಾದಿಯ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸರಿ ಸಾಕ್ಷಿ ಮುಂದುವರೆದು 80 ಸೆಂಟ್ಸ ಜಮೀನಿನಲ್ಲಿ ನಾನು ಕಬ್ಜ ಇದ್ದೇನೆ ಎನ್ನುತ್ತಾರೆ. ಸದರಿ 80 ಸೆಂಟ್ಸ ಜಮೀನಿನಲ್ಲಿ ನಾನು ಕಬ್ಜ ಇರುತ್ತೇನಂತಾ ತೋರಿಸಲು ದಾನಪತ್ರ ಹಾಜರು ಮಾಡಿದ್ದೇನೆ. ಸದರಿ 80 ಸೆಂಟ್ಸ ಜಮೀನಿನಲ್ಲಿ ನಾವೇ ಸ್ವಾಧೀನದಲ್ಲಿರುತ್ತೇವಂತಾ ಸರ್ವೆ ಇಲಾಖೆಯಿಂದ ಸರ್ವೆ ಮಾಡಿಸಲು ಪ್ರಯತ್ನಿಸಿರುವುದಿಲ್ಲ. ನಾನು 80 ಸೆಂಟ್ಸ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತೇನಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

2.80 ಎಕರೆ ಜಮೀನನ್ನು ಪ್ರತಿವಾದಿಯರ ತಂದೆ ಖರೀದಿ ಮಾಡಿದ ಜಮೀನು ಎಂದರೆ ಸರಿ. ಪ್ರತಿವಾದಿಯರ ತಂದೆ ಸದರಿ ಜಮೀನನ್ನು ದಿಃ 11-01-2005 ರಂದು ರೂ.87 ಸಾವಿರಗಳಿಗೆ ಚಿಕ್ಕಣ್ಣರ ಹೊನ್ನಮ್ಮ ಇವರಿಂದ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿಗೆ ಪಡೆದಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನಿಮಗೆ ಗೊತ್ತಾಗಿ ನೀವೇನಾದರೂ ತಕರಾರು ಮಾಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರ ಹೆಸರಿಗೆ 2.80 ಎಕರೆ ಜಮೀನು ದಾಖಲಾಗಿದೆ ಅಂತಾ ತಿಳಿದು ನೀವೇನಾದರೂ ತಹಶೀಲ್ದಾರ್ ಕಾರ್ಯಾಲಯಕ್ಕೆ ತಕರಾರು ಅರ್ಜಿ ನೀಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆ ಸದರಿ ಜಮೀನನ್ನು ಖರೀದಿ ಹಿಡಿದ ದಿನದಿಂದ ಅವರೇ ಸ್ವಾಧೀನದಲ್ಲಿದ್ದರು ಎಂದರೆ ಸುಳ್ಳು. ಪ್ರತಿವಾದಿಯರ ತಂದೆಯ ಮರಣದ ನಂತರ ಪ್ರತಿವಾದಿ ಮತ್ತು ಅವರ ಸಹೋದರ ಪಾಲುವಿಭಾಗ ಮಾಡಿಕೊಂಡಿದ್ದು ಅದರಂತೆ ಪ್ರತಿವಾದಿಯು ಸದರಿ 2.80 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾನೆಂದರೆ ಸರಿಯಲ್ಲ. ಪ್ರತಿವಾದಿಯು ಪಾಲುವಿಭಾಗದಂತೆ ತನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳುವ ಸಮಯದಲ್ಲಿ ಸರ್ವೆ ಇಲಾಖೆಯಿಂದ 11 ಇ ನಕಾಶೆಯನ್ನು ಮಾಡಿಸಿಕೊಂಡಿದ್ದು ಸರ್ವೆ ಇಲಾಖೆಯವರು 2.80 ಎಕರೆ ಜಮೀನಿಗೆ ಸಂಬಂಧಿಸಿದಂತೆ ನಕಾಶೆಯನ್ನು ನೀಡಿರುತ್ತಾರೆಂದರೆ ನಮಗೆ ನೋಟೀಸ್ ಬಂದಿಲ್ಲವೆನ್ನುತ್ತಾರೆ. ಪ್ರತಿವಾದಿಯರ 80 ಸೆಂಟ್ಸ ಆಸ್ತಿಯನ್ನು ಕಬಳಿಸಲು ಎ ಸಿ ನ್ಯಾಯಾಲಯದ ಮತ್ತು ಡಿ ಸಿ ನ್ಯಾಯಾಲಯದಲ್ಲಿ ಸಲ್ಲಿಸಿದಂತಹ ಮೇಲ್ಮನವಿಗಳು ವಜಾ ಆಗಿರುತ್ತವೆಂದರೆ ಸಾಕ್ಷಿಯು ಮೇಲ್ಮನವಿಗಳು ವಜಾ ಆಗಿರುತ್ತವೆ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ

ಕಂಡುಕೊಳ್ಳಿ ಅಂತಾ ನಮಗೆ ತಿಳಿಸಿರುತ್ತಾರೆ. ಪ್ರತಿವಾದಿಯು ಸಂಪೂರ್ಣ 2.80 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದು ನಾವು ಅವನಿಗೆ ಸೇರಿದ ೮೦ ಸೆಂಟ್ಸ ಜಮೀನಿನಲ್ಲಿ ಪ್ರತಿಕೂಲ ಕಬ್ಜೆನಾಥೆಯಿಂದ ಸ್ವಾಧೀನದಲ್ಲಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ೮೦ ಸೆಂಟ್ಸ ಜಮೀನಿನಲ್ಲಿ ನೀವು ಯಾವ ದಿನಾಂಕದಿಂದ ಸ್ವಾಧೀನದಲ್ಲಿದ್ದೀರಿ ಎಂದರೆ ಸಾಕ್ಷಿಯು ದಿಃ 04-11-1954 ರಿಂದ ಸ್ವಾಧೀನದಲ್ಲಿರುತ್ತೇನೆ ಎನ್ನುತ್ತಾರೆ. ನೀವು ಸಹೋದರರು ವಿಭಾಗ ಮಾಡಿಕೊಂಡ ಸಮಯದಲ್ಲಿ ಸದರಿ ೮೦ ಸೆಂಟ್ಸ ಜಮೀನನ್ನು ಸೇರಿಸಿ ನಿಮ್ಮ ಹೆಸರಿಗೆ ಖಾತೆ ಮಾಡಿಕೊಳ್ಳಲು ಸರ್ವೆ ಇಲಾಖೆಯಲ್ಲಿ ಕೇಳಿಕೊಂಡ್ರಾ ಎಂದರೆ ಸಾಕ್ಷಿಯು ನಾವು 3.80 ಎಕರೆ ಇದೆ ಅಂತಾ ಸುಮ್ಮನಾಗಿರುತ್ತೇವೆ ಎನ್ನುತ್ತಾರೆ. ನಾವು ೩ ಎಕರೆ ಜಮೀನಿನಲ್ಲಿ ಮಾತ್ರ ಸ್ವಾಧೀನದಲ್ಲಿರುತ್ತೇವಂತಾ ನಮಗೆ ಗೊತ್ತಿದ್ದರೂ ಸಹಾ ಪ್ರತಿವಾದಿಗೆ ಸೇರಿದ ೮೦ ಸೆಂಟ್ಸ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿ ಅದಕ್ಕನುಗುಣವಾಗಿ ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ